ಪ್ರೇಮಾಯತನವು ಕರ್ನಾಟಕ ಸಂಸ್ಕೃತಿ ಸೃಷ್ಟಿಸಿದ ವಿಶಿಷ್ಟ ಗುರುಕುಲ. ಇಂತಹುದೇ ಪ್ರಯೋಗಗಳನ್ನು, ಇಂಚಗೇರಿಯ ಮುರಗೋಡ ಮಹದೇವಪ್ಪ, ಮಂಗಳೂರಿನ ಕುದ್ಮಲ್ ರಂಗರಾವ್, ಶಿವಗಿರಿಯ ನಾರಾಯಣಗುರು, ವಿಜಯವಾಡದ ಗೋರಾ, ಸಾಲಿಗ್ರಾಮದ ಶಿವರಾಮ ಕಾರಂತರು ತಮ್ಮ ಊರುಗಳಲ್ಲಿ ಮಾಡಿದರು.

ಹುಬ್ಬಳ್ಳಿಯಲ್ಲಿ 'ವೀರಭಾರತ ಸಂಗೀತ ಕಲೋದ್ಧಾರಕ್ ಭವನದ ಉದ್ಘಾಟನೆಯನ್ನು (1935) ನೆರವೇರಿಸಿದರು. ನಟರೂ ನಿರ್ದೇಶಕರೂ ಆಗಿದ್ದ ಅವರಿಗೆ, ಆಕಾಲದ ಪ್ರಸಿದ್ಧ ನಟರಾಗಿದ್ದ ಬಳ್ಳಾರಿ ರಾಘವರ ಜತೆ ಗಾಢ ಸಂಬಂಧವಿತ್ತು. ಕಬೀರನ ಮೇಲೆ ಅವರು ಆಡಿಸಿದ ಸಂಗೀತ ನಾಟಕಕ್ಕೆ, ಸಂಜೆ ಪ್ರಾರ್ಥನೆಯ ಸಮಯವನ್ನು ತ್ಯಾಗಮಾಡಿ ಹೋಗಿದ್ದ ಗಾಂಧಿ, 'ಈ ನಾಟಕ ಪ್ರಾರ್ಥನೆಗೆ ಏನೂ ಕಡಿಮೆಯಲ್ಲ' ಎಂದು ಪ್ರತಿಕ್ರಿಯಿಸಿದ್ದು ಮಾರ್ಮಿಕ.

ತಾರಾನಾಥರು ಒಬ್ಬ ಘನವಾದ ವಿದ್ವಾಂಸರಾಗಿದ್ದರು. ಇದಕ್ಕೆ ಅವರ ಬರೆಹಗಳ ಸಂಪುಟಗಳಾದ 'ಅಂಟಿದ ನಂಟು' ಹಾಗೂ 'ರಸೌಷಧಿ' (ಸಂ: ಎಂ. ಧ್ರುವಕುಮಾರ್, ಕಿ.ರಂ. ನಾಗರಾಜ) ಸಾಕ್ಷಿಯಾಗಿವೆ. ಈ ಸಂಪುಟಗಳು ಪ್ರೇಮಾಯತನ ಹಾಗೂ ಹಮ್‌ದರ್ದ್ ಸಂಸ್ಥೆಗಳಿಗೆ ಅರ್ಪಿತವಾಗಿರುವುದು ಅರ್ಥಪೂರ್ಣವಾಗಿದೆ. ಈ ಸಂಪುಟಗಳಲ್ಲಿರುವ ಬಹುತೇಕ ಲೇಖನಗಳು, ಪ್ರೇಮಾಯತನದಿಂದ ಪ್ರಕಟವಾಗುತ್ತಿದ್ದ 'ಪ್ರೇಮ' (1924) ಪತ್ರಿಕೆಯಲ್ಲಿ ಪ್ರಕಟಗೊಂಡವು. ಎರಡೂ ಸಂಪುಟಗಳಲ್ಲಿ ತಾರಾನಾಥರು ಉಲ್ಲೇಖಿಸುವ ಲೇಖಕರ ಮತ್ತು ಕೃತಿಗಳ ಹೆಸರುಗಳು, ಅವರ ಅಧ್ಯಯನದ ವಿಶಾಲ ಹರಹನ್ನು ಸೂಚಿಸುತ್ತವೆ. ಅವರ ಅಪ್ರಕಟಿತ ಡೈರಿಗಳಲ್ಲಿರುವ ಉರ್ದು, ಸಂಸ್ಕೃತ, ಹಿಂದಿ ಉಲ್ಲೇಖಗಳೂ, ಅವಕ್ಕೆ ಇಂಗ್ಲಿಷ್‌ನಲ್ಲಿ ಮಾಡಿರುವ ವ್ಯಾಖ್ಯಾನಗಳೂ, ಅವರ ಬಹುಭಾಷಿಕ ಪಾಂಡಿತ್ಯವನ್ನು ಸಾಬೀತುಪಡಿಸುತ್ತವೆ. ಕೈಲಾಸಂ, ಶ್ರೀರಂಗ, ಶಂಬಾ ಜೋಶಿ, ಶಿವರಾಮ ಕಾರಂತ, ಅನಕೃ, ಹಾಸನದ ರಾಜಾರಾವ್, ಪ್ರೇಮಾಯತನಕ್ಕೆ ಭೇಟಿಕೊಡುತ್ತಿದ್ದ ಪ್ರಮುಖ ಲೇಖಕರಾಗಿದ್ದರು. 'ಪ್ರೇಮಾಯತನ'ದ ಪ್ರಯೋಗಗಳ ಬಗ್ಗೆ ಕುತೂಹಲಪಟ್ಟು ವಿದೇಶಗಳಿಂದ ಪತ್ರಕರ್ತರು ಬರುತ್ತಿದ್ದರು. ಕೆಲವು ಲೇಖಕರು ಆಶ್ರಮದಲ್ಲಿ ಕೆಲವು ದಿನಗಳಿದ್ದು ಕೃತಿರಚನೆ ಮಾಡುತ್ತಿದ್ದರು. ಶ್ರೀರಂಗರ 'ಹರಿಜನ್ವಾರ' ಹಾಗೂ ಕೈಲಾಸಂ ಅವರ 'ಹೋಂರೂಲ್' ನಾಟಕಗಳು ಇಲ್ಲಿ ರಚಿತವಾದವು. 'ಪ್ರೇಮ' (1924) ಪತ್ರಿಕೆಯಲ್ಲಿ ಬೇಂದ್ರೆ, ಕಾರಂತ, ಶ್ರೀರಂಗರು ಬರೆಯುತ್ತಿದ್ದರು. 20ನೇ ಶತಮಾನದ ಪೂರ್ವಾರ್ಧದಲ್ಲಿ, ಪ್ರೇಮಾಯತನವು ಕನ್ನಡ ಲೇಖಕರು ಹಾಗೂ ವಿದ್ವಾಂಸರು ಕಲಿಯುವ ಒಂದು ಸೃಜನಶೀಲ ಕಮ್ಮಟವಾಗಿತ್ತು.

## ವೈದ್ಯಕೀಯ ಪ್ರಯೋಗ

ತಾರಾನಾಥರು ಮೂಲತಃ ಒಬ್ಬ ವೈದ್ಯರು. ಅವರು ಹೈದರಾಬಾದಿನಲ್ಲಿ ರಸಾಯನಶಾಸ್ತ್ರ ಕಲಿತರು. ಇವರಿಗೆ ಗುರುವಾಗಿದ್ದವರು ಅಘೋರನಾಥ ಚಟ್ಟೋಪಾಧ್ಯಾಯ–ಸರೋಜಿನಿ ನಾಯ್ಡು ಅವರ ತಂದೆ. ಹೈದರಾಬಾದಿನ ರಾಜವೈದ್ಯ ಹಕೀಮ ಹರಿಗೋವಿಂದ ಅವರು, ಇವರಿಗೆ ಆಯುರ್ವೇದ ಕಲಿಸಿದರು. ಯೋಗಿ ಉತ್ತಮದಾಸ ಪರಮಹಂಸ ಹಾಗೂ ಯೋಗೀಶ್ವರಾನಂದರು